**O.S**.102/2022 **DW**-1

ದಿನಾಂಕಃ 20.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟೀ ಸವಾಲು ವಾದಿಯ ಪರ ಶ್ರೀ. ಎಂ.ಇ.ಎಸ್. ವಕೀಲರಿಂದ :-**

ಸರ್ವೆ ನಂ.4/2 ಮೂಲತಃ ಯಾರಿಗೆ ಸೇರಿದ ಸ್ವತ್ತು ಎಂದರೆ ಸಾಕ್ಷಿ ಜವರೇಗೌಡ ಸಾಕಮ್ಮರವರಿಗೆ ಸೇರಿದ ಜವೀನು ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಮೂಲತಃ ನರಸಿಂಹೇಗೌಡರಿಗೆ ಸೇರಿದ್ದು ಎಂದರೆ ಹೌದು, ನರಸಿಂಹೇಗೌಡರು ಜವರೇಗೌಡರ ತಂದೆ ಎಂದು ನುಡಿಯುತ್ತಾರೆ. ನರಸಿಂಹೇಗೌಡರಿಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳು. ಗಂಡು ಮಕ್ಕಳ ಹೆಸರುಗಳೆಂದರೆ ಜವರೇಗೌಡ ಮತ್ತು ಚಲುವೇಗೌಡ. ಇಬ್ಬರು ಸಹ ತೀರಿಕೊಂಡಿರುತ್ತಾರೆಂದರೆ ಹೌದು. ಸರ್ವೆ ನಂ.4/2 ಒಟ್ಟು 7 ಎಕರೆ 32 ಗುಂಟೆ ಜಮೀನು ಇತ್ತು ಎಂದರೆ ಸರಿ. ನರಸಿಂಹೇಗೌಡರು ತೀರಿ ಹೋದ ನಂತರ ಈ 7 ಎಕರೆ 32 ಗುಂಟೆ ಜಮೀನನ್ನು ಅವರ ಮಕ್ಕಳಾದ ಜವರೇಗೌಡ ಮತ್ತು ಚಲುವೇಗೌಡ ಸಮನಾಗಿ ಹಂಚಿಕೆ ಮಾಡಿಕೊಂಡು ಅನುಭವದಲ್ಲಿರುತ್ತಾರೆಂದರೆ ಸಾಕ್ಷಿ ಹೌದು, ಅದರಲ್ಲಿ 2 ಎಕರೆ ಆಸ್ತಿಯನ್ನು ಜವರೇಗೌಡರು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ. ಕ್ರಯಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ.

ಜವರೇಗೌಡರವರ ಹೆಂಡತಿ ಹೆಸರು ಲಕ್ಷ್ಮಮ್ಮ, ಜವರೇಗೌಡರಿಗೆ ಗಂಡು ಮಕ್ಕಳು ಇಲ್ಲವೆಂದರೆ ಹೌದು. ಜವರೇಗೌಡರಿಗೆ ಜಯಮ್ಮ ಮತ್ತು ಕಲ್ಯಾಣಮ್ಮ ಒಂದು ಮತ್ತು ಎರಡನೇ ಪ್ರತಿವಾದಿಯರು ಇಬ್ಬರೇ ಹೆಣ್ಣು ಮಕ್ಕಳು ಎಂದರೆ ಹೌದು. ಜವರೇಗೌಡರು ಮರಣಕ್ಕಿಂತ ಮೊದಲು ಅವರ ಮಕ್ಕಳಾದ 1 ಮತ್ತು 2ನೇ ಪ್ರತಿವಾದಿಯರನ್ನು ಮದುವೆ

ಮಾಡಿಕೊಟ್ಟಿದ್ದು, ಅವರು ಗಂಡನ ಮನೆಯಲ್ಲಿರುತ್ತಾರೆಂದರೆ ಹೌದು. 1 ಮತ್ತು 2ನೇ ಪ್ರತಿವಾದಿಗಳ ಮದುವೆಯಾದ ನಂತರ ಅವರ ತಾಯಿ ಲಕ್ಷಮ್ಮ ತೀರಿಕೊಂಡಿರುತ್ತಾರೆಂದರೆ ಹೌದು. ಲಕ್ಷಮ್ಮ ತೀರಿಕೊಂಡ ನಂತರ ಜವರೇಗೌಡ ಒಬ್ಬರೇ ವಾಸವಾಗಿದ್ದರು ಎಂದರೆ ಸಾಕ್ಷಿ ಇಲ್ಲ ಅವರು ಚಲುವೇಗೌಡರೊಂದಿಗೆ ಒಟ್ಟಿಗೆ ವಾಸವಾಗಿದ್ದರು ಎಂದು ನುಡಿಯುತ್ತಾರೆ. 1 ಮತ್ತು 2ನೇ ಪ್ರತಿವಾದಿಗಳು ಮದುವೆಯಾಗುವ ಸಂದರ್ಭದಲ್ಲಿ ಹಾಗೂ ಲಕ್ಷ್ಮಮ್ಮ ತೀರಿಕೊಳ್ಳುವ ಸಮಯದಲ್ಲಿ ಜವರೇಗೌಡರ ಕುಟುಂಬ ಹಾಗೂ ಚಲುವೇಗೌಡರ ಕುಟುಂಬ ಬೇರೆ ಬೇರೆಯಾಗಿ ವಾಸಿಸುತ್ತಿದ್ದರು ಎಂದರೆ ಸಾಕ್ಷಿ ಇಲ್ಲ ಒಟ್ಟಿಗೆ ವಾಸಿಸುತ್ತಿದ್ದರು ಎಂದು ನುಡಿಯುತ್ತಾರೆ. ಜವರೇಗೌಡರು ತೀರಿಕೊಳ್ಳುವ ಮೊದಲು ವಾದಿಯ ಮದುವೆಯಾಗಿತ್ತು. ಜವರೇಗೌಡ ಮಕ್ಕಳು 1 ಮತ್ತು 2ನೇ ಪ್ರತಿವಾದಿಯರು ಮದುವೆ ಮಾಡಿಕೊಂಡು ಹೋಗಿದ್ದು, ಜವರೇಗೌಡರ ಹೆಂಡತಿ ಲಕ್ಷ್ಮಮ್ಮ ತೀರಿಕೊಂಡಿದ್ದರಿಂದ ಜವರೇಗೌಡರನ್ನು ವಾದಿಯೇ ನೋಡಿಕೊಳ್ಳುತಿದ್ದರೆಂದರೆ ಸರಿಯಲ್ಲ.

**ಪ್ರತಿವಾದಿಯ ವಕೀಲರು ಪಾಟೀ ಸವಾಲಿಗೇ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ, ಹೊಳೆನರಸೀಪುರ.